**ಮೆ. ರಾಕೆಟ್ ರಿದ್ಧಿ ಸಿದ್ಧಿ ಪ್ರೈವೆಟ್ ಲಿಮಿಟೆಡ್, ಕಂಪನಿಯವರು ಬೆಳಗಾವಿ ಜಿಲ್ಲೆಯ, ಗೋಕಾಕ ತಾಲ್ಲೂಕು, ಸರ್ವೆ ನಂ. 250, 259, 260, 262, 471, 263 ಮತ್ತು 473 ರಲ್ಲಿ ಸ್ಥಾಪಿತಗೊಂಡಿರುವ ಕೈಗಾರಿಕೆಯ ಸಹವಿದ್ಯುತ್ ಘಟಕದ ಸಾಮರ್ಥ್ಯವನ್ನು 6 ಮೆಗಾ ವ್ಯಾಟ್ ನಿಂದ 18 ಮೆಗಾ ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಸಾರ್ವಜನಿಕ ಪರಿಸರ ಕುರಿತು ಆಲಿಕೆಯ ಸಭೆ. ಈ ಉದ್ದೇಶಿತ ಯೋಜನೆಯ ವಿಸ್ತರಣೆಯ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಪರಿಸರ ಕುರಿತು ಆಲಿಕೆ ಸಭೆಯ ನಡುವಳಿಕೆಗಳು.**

**ದಿನಾಂಕ :** 23-10-2017.

**ವೇಳೆ** : ಬೆಳಿಗ್ಗೆ 12.30 ಘಂಟೆಗೆ,

**ಸ್ಥಳ** : ರಾಕೆಟ್ ರಿದ್ಧಿ ಸಿದ್ಧಿ ಪ್ರೈವೆಟ್ ಲಿಮಿಟೆಡ್, ಗೋಕಾಕ ಫಾಲ್ಸ್ ರೋಡ, ಗೋಕಾಕ **ಸರ್ವೆ** ನಂ. **250, 259, 260, 262, 471, 263 ಮತ್ತು 473 ರಲ್ಲಿ ಗೋಕಾಕ** ತಾಲ್ಲೂಕು, ಬೆಳಗಾವಿ ಜಿಲ್ಲೆ.

ಮೆ. ರಾಕೆಟ್ ರಿದ್ಧಿ ಸಿದ್ಧಿ ಪ್ರೈವೆಟ್ ಲಿಮಿಟೆಡ್, ಕಂಪನಿಯವರು ಬೆಳಗಾವಿ ಜಿಲ್ಲೆಯ, ಗೋಕಾಕ ತಾಲ್ಲೂಕು, ಸರ್ವೆ ನಂ. 250, 259, 260, 262, 471, 263 ಮತ್ತು 473 ರಲ್ಲಿ ಸ್ಥಾಪಿತಗೊಂಡಿರುವ ಕೈಗಾರಿಕೆಯ ಸಹವಿದ್ಯುತ್ ಘಟಕದ ಸಾಮರ್ಥ್ಯವನ್ನು 6 ಮೆಗಾ ವ್ಯಾಟ್ ನಿಂದ 18 ಮೆಗಾ ವ್ಯಾಟ್‌ಗೆ ಹೆಚ್ಚಿಸಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 23-10-2017 ರಂದು ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 12.30 ಘಂಟೆಗೆ ಯೋಜನೆಯ ಸ್ಥಳದಲ್ಲಿ ನಡೆಸಿದ ಸಾರ್ವಜನಿಕ ಪರಿಸರ ಕುರಿತು ಆಲಿಕೆ ಸಭೆಯ ನಡುವಳಿಕೆಗಳು.

| | | |
|---|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : | ರಾಕೆಟ್ ರಿದ್ಧಿ ಸಿದ್ಧಿ ಪ್ರೈವೆಟ್ ಲಿಮಿಟೆಡ್, ಗೋಕಾಕ ಫಾಲ್ಸ್ ರೋಡ, ಗೋಕಾಕ ತಾಲ್ಲೂಕು ಮತ್ತು ನಗರ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿದಿಗಳ ವಿವರ | : | ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಸಭೆಯ ಬಗ್ಗೆ ಜಾಗೃತಿ ಮೂಡಿಸಲು ಹಮ್ಮಿಕೊಂಡ ವಿವರ | : | ಅನುಬಂಧ-4 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : | ಅನುಬಂಧ-5 |
| ಸಭೆಯಲ್ಲಿ ಮಂಡಿಸಿದ ಶಕ್ತಿ ಬಿಂದು ಪ್ರದರ್ಶನದ ಪ್ರತಿ | : | ಅನುಬಂಧ-6 |

**ಪೀಠಿಕೆ:**

ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡೆ ಇಲ್ಲಿಯವರೆಗೆ) ಪ್ರಕಾರ ಸದರಿ ಯೋಜನೆಯು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರಕಾರ, ಇವರಿಂದ ವಿಮೋಚನಾ ಪತ್ರವನ್ನು ಪಡೆಯಬೇಕಿರುತ್ತದೆ. ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರಕಾರ, ದಿನಾಂಕ: 14-09-2006 (ತಿದ್ದುಪಡೆ ಇಲ್ಲಿಯವರೆಗೆ) ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಸದರಿ ಯೋಜನೆಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ನಿರ್ದೇಶಕರು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರಕಾರ ಇವರು ಸದರಿ ಯೋಜನೆಯ **Terms of reference (TOR)** ಅನ್ನು ದಿನಾಂಕ: 26-07-2016 ರಂದು ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಮೆ: ರಾಕೇಟ್ ರಿದ್ಧಿ ಸಿದ್ಧಿ ಪ್ರೈವೆಟ್ ಲಿಮಿಟೆಡ್, ಗೋಕಾಕ ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅಧಿಭೋಗದಾರರು ದಿನಾಂಕ: 31-07-2017 ರ ಪತ್ರದ ಮೂಲಕ ಕರ್ನಾಟಕ ರಾಜ್ಯ ಮಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ದಿನಾಂಕ: 22-09-2017 ರಂದು ರಾಜ್ಯ ಮಟ್ಟದ ಪತ್ರಿಕೆಗಳಾದ ದಿ ಹಿಂದು (ಆಂಗ್ಲ), ಪ್ರಜಾವಾಣಿ (ಕನ್ನಡ), ಮತ್ತು ವಿಜಯವಾಣಿ ಸ್ಥಳೀಯ ಆವೃತ್ತಿ (ಕನ್ನಡ) ದಿನ ಪತ್ರಿಕೆಗಳಲ್ಲಿ ದಿನಾಂಕ: 05-10-2017 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲು ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು. ಜೊತೆಗೆ ಧ್ವನಿವರ್ಧಕ ಮೂಲಕ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಕುರಿತು ಪ್ರಚಾರ ಮಾಡಲಾಗಿರುತ್ತದೆ. ಇದರ ವಿವರಗಳನ್ನು ಅನುಬಂಧ-4 ರಲ್ಲಿ ಲಗತ್ತಿಸಲಾಗಿದೆ.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 23-10-2017 ರಂದು ಬೆಳಿಗ್ಗೆ 12.30 ಘಂಟೆಗೆ ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು ಡಾ. ಸುರೇಶ ಇಟ್ನಾಳ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರಿಗೆ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು. ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ನಾಗರಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ

ಕಛೇರಿಗಳಲ್ಲಿ (ಆರು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಮುಂದಿನ ಸಭೆಯನ್ನು ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಮೆ॥ ಪೊಯನೀರ್ ಎನ್ವಿರೊ ಲ್ಯಾಬೊರೆಟರೀಸ್ ಮತ್ತು ಕನ್ಸಲಟಂಟ್ ಪ್ರೈವೇಟ್ ಲಿಮಿಟೆಡ್‌ನವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು ಅನುಬಂಧ–6 ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳು ಮತ್ತು ಕೈಗಾರಿಕೆ ಪ್ರತಿನಿಧಿಗಳು ನೀಡಿದ ಉತ್ತರಗಳು ಈ ಕೆಳಗಿನಂತಿವೆ.

1. **ಕಾಡಪ್ಪ ದುರ್ಗಪ್ಪ ಮೆಸ್ತ್ರಿ: ಗೋಕಾಕ ನಿವಾಸಿ**
   10 ವರ್ಷಗಳ ಹಿಂದೆ ಸದರಿ ಕಾರ್ಖಾನೆಯ ಆವರಣದಲ್ಲಿ ಬಸ್ಸಿನಲ್ಲಿ ಪ್ರಯಾಣಿಸುವಾಗ ಆಕ್ಷೇಪಾರ್ಹವಾದ ವಾಸನೆ ಅನುಭವವಾಗುತ್ತಿತ್ತು. ಇತ್ತೀಚಿಗೆ ರಾಕೆಟ್ ಕಂಪನಿಯು ನವೀನ ವಿಧಾನಗಳ ಮೂಲಕ ವಾಸನೆಯ ತೀವ್ರತೆಯನ್ನು ತಗ್ಗಿಸಲು ಪ್ರಾರಂಭಿಸಿದೆ ಮತ್ತು ವಾಸನೆ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದು ಅವರು ವ್ಯಕ್ತಪಡಿಸಿದರು. ಈ ಕಂಪನಿಯು ಅಸ್ತಿತ್ವದಲ್ಲಿರುವದರಿಂದ ಸುಮಾರು 3,000 ಜನ ನೇರವಾಗಿ ಮತ್ತು 30,000 ಜನಪರೋಕ್ಷವಾಗಿ ತಮ್ಮ ಜೀವನೋಪಾಯವನ್ನು ನಿರ್ವಹಿಸುತ್ತಿದ್ದಾರೆ. ಉದ್ದಿಮೆಯಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಗೋಕಾಕ ನಗರಕ್ಕೆ ಪೂರೈಸಲಿ ಎಂದರು.

2. **ಯಲ್ಲಪ್ಪಾ ಹಾಲ್ಲಪ್ಪಾ ಸಣ್ಣ ನಾಯಕ : ಗೋಕಾಕ ಫಾಲ್ಸ್ ನಿವಾಸಿ**
   ಮಾನ್ಯ ಪ್ರಧಾನಮಂತ್ರಿಯವರು ಸ್ವಚ್ಛಭಾರತ ಆಂದೋಲನ ಜಾರಿಗೆ ತಂದಂತೆ, ಈ ಕಂಪನಿಯವರೂ ಪರಿಸರ ಬಗ್ಗೆ ಒತ್ತು ನೀಡಿ ಸುಧಾರಣೆ ತಂದಿದ್ದಾರೆ. ಕಂಪನಿಯು ಉರ್ದು ಪ್ರಾಥಮಿಕ ಶಾಲೆ, ಗೋಕಾಕನಲ್ಲಿ ಸಾಮೂಹಿಕ ವೈದ್ಯಕೀಯ ಕಣ್ಣಿನ ಪರಿಶೀಲನೆ ಕಾರ್ಯಕ್ರಮವನ್ನು ಮಾಡಿದೆ ಮತ್ತು ಕಂಪನಿಯು ಕಡಿಮೆ ದೃಷ್ಟಿ ಹೊಂದಿರುವ ವಿದ್ಯಾರ್ಥಿಗಳಿಗೆ ಉಚಿತ ಕನ್ನಡಕವನ್ನು ಒದಗಿಸಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಸಿಎಸ್ಆರ್ ಚಟುವಟಿಕೆಗಳ ಅಡಿಯಲ್ಲಿ ಕ್ಷಯದಿಂದ ಬಳಲುತ್ತಿರುವ ಮಕ್ಕಳಿಗಾಗಿ ಉಚಿತ ಔಷಧಗಳನ್ನು, ಪೋಷಾಂಕಶಗಳನ್ನು ನೀಡಿದ್ದಾರೆ. ಕಂಪನಿಯು ಖನಗಾಂವ, ಕೊಳವಿ, ಶಿಂಧಿ ಕುರುಬೆಟ್ ಮತ್ತು ಮರಡಿಮಠ ಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಿದೆ. ಭವಿಷ್ಯದಲ್ಲಿ ಸಾರ್ವಜನಿಕರ ಆಸಕ್ತಿಗಾಗಿ ಈ ಸಾಮಾಜಿಕ ಸೇವೆ ಮುಂದುವರೆಯ ಬೇಕೆಂದು ಅವರು ಆಶಿಸಿದರು.

3. **ವಿ. ಸುನಂದಾ ರೆಡ್ಡಿ: ನಳಂದ ಜಿಲ್ಲೆ, ತೆಲಗಾಂಣ ನಿವಾಸಿ**
   ನಾನು ಭಾರತ ದೇಶದಲ್ಲಿಯೇ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ಮೊದಲ ಪರಿಸರವಾದಿ. ಸಾಮಾನ್ಯವಾಗಿ ಪರಿಸರವಾದಿಗಳು ಕೈಗಾರಿಕೆಯನ್ನು ವಿರೋಧಿಸುತ್ತಾರೆ. ಆದರೆ ನಾನು ಕೈಗಾರಿಕೆಗಳ ಪೋಷಕ. ಅವರು ಉದ್ಯೋಗ ಮತ್ತು ಪರಿಸರ ರಕ್ಷಣೆಗಾಗಿ ಅವರ ಆಲೋಚಣೆಗಳನ್ನು ವ್ಯಕ್ತಪಡಿಸಿದರು. ಉದ್ದಿಮೆಗಳನ್ನು ಪ್ರೋತ್ಸಾಹಿಸಲು ಬೇರೆ ಬೇರೆ ರಾಜ್ಯಗಳಿಗೆ ಭೇಟಿ ನೀಡಿ ಸಾರ್ವಜನಿಕ ಆಲಿಕೆಯ ಸಭೆಯಲ್ಲಿ ಭಾಗವಹಿಸುವದಾಗಿ ತಿಳಿಸಿದರು. ಅವರು ಉದ್ಯಮದಾರರಿಗೆ ವಿನಂತಿಸುತ್ತ, ಉದ್ದಿಮೆ ಆವರಣದಲ್ಲಿ ಮಳೆ ನೀರು ಕೋಯ್ಲು ಯೋಜನೆಗಳನ್ನು ಸುಧಾರಿಸಲು ಸಲಹೆ ನೀಡಿದರು ಮತ್ತು ಮಳೆ ನೀರನ್ನು ಶೇಖರಿಸಲು ವ್ಯವಸ್ಥೆಗಳನ್ನು ರೂಪಿಸಲು ಸಲಹೆ ನೀಡಿದರು. ಸ್ಥಳೀಯರಿಗೆ ಉದ್ಯೋಗವಕಾಶ, ಕೈಗಾರಿಕೆ ಕೌಶಲ್ಯ ಅಭಿವೃದ್ಧಿ ತರಬೇತಿಗಳನ್ನು ಜಪಾನ

ಹಾಗೂ ಕೋರಿಯಾ ದೇಶದ ಮಾದರಿಗಳಲ್ಲಿ ಆಯೋಜಿಸಲು ಸಲಹೆ ನೀಡಿದರು. ಅವರು ಉದ್ಯಮವನ್ನು ವಿನಂತಿಸುತ್ತ ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕಮೀಟಿಯನ್ನು ಪರಿಸರ ಮಾಲಿನ್ಯ ಅಧಿಕಾರಿಗಳು ಮತ್ತು ಕಂಪನಿಯ ಅಧಿಕಾರಿಗಳು ಹಾಗೂ ಸ್ಥಳೀಯರೊಂದಿಗೆ ರಚಿಸಬೇಕು. ಅವರು ಉದ್ದಿಮೆಯನ್ನು ವಿನಂತಿಸುತ್ತ 10 ಕಿ. ಮೀ. ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟ ಸುಧಾರಿಸಲು, ಸ್ಥಳೀಯರ ಆರೋಗ್ಯವನ್ನು ಕಾಪಾಡಲು, ಹಾಗೂ ಔಷಧಿಯ ಸಸ್ಯಗಳನ್ನು ಬೇಳೆಸಲು ವಿನಂತಿಸಿದರು. ವಾಯು, ನೀರು, ಶಬ್ದ ಮಾಲಿನ್ಯ ಮತ್ತು ಭೂಮಿಯ ರಕ್ಷಣೆಗಾಗಿ ಹಾಗೂ ಪರಿಸರ ಸಮತೋಲನ ಹಾಗೂ ಪರಿಸರ ರಕ್ಷಣೆಗೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೋಳ್ಳಲು ಅವರು ಉದ್ಯಮವನ್ನು ವಿನಂತಿಸಿದರು. ಉದ್ಯಮದ ಸಲಹೆಗಾರರು ಪೂರ್ಣ ಪ್ರಮಾಣದ ಪರಿಸರ ಆಘಾತ ಅಧ್ಯಯನ (E.I.A) ವರಧಿಯನ್ನು ಮಾಡಿರುತ್ತಾರೆ. ಅವರು ಸಾರ್ವಜನಿಕ ಆಲಿಕೆಯ ಸಮೀತಿಯನ್ನು ವಿನಂತಿಸುತ್ತ, ರಾಕೆಟ್ ರಿದ್ಧಿ ಸಿದ್ಧಿ ಉದ್ದಿಮಕ್ಕೆ ಷರತ್ತು ರಹಿತ ವಿಮೋಚನಾ ಪತ್ರವನ್ನು ನೀಡಲು ವಿನಂತಿಸಿಕೊಂಡರು.

4. **ಶ್ರೀಮತಿ ಕವಿತಾ ಪಾಟೀಲ: ಗ್ರಾಮ ಪಂಚಾಯತ ಸದ್ಯಸರು, ಕೊಣ್ಣೂರು ನಿವಾಸಿ.**
ಸಮಾಜದ ಸುತ್ತು ಮುತ್ತಲಿನ ಪರಿಸರದ ಬಗ್ಗೆ ಕಾಳಜಿ ಹೊಂದಿರುವ ರಾಕೇಟ ಕಂಪನಿಗೆ ಅವರು ತಮ್ಮ ಕೃತಜ್ಞತೆಯನ್ನು ವ್ಯಕ್ತ ಪಡಿಸಿದರು. ಕಂಪನಿಯು ಅನೇಕ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಒದಗಿಸಿದೆ ಹಾಗೂ ವಿದ್ಯಾರ್ಥಿ ಸಮುದಾಯಕ್ಕೆ ಶುದ್ಧ ನೀರನ್ನು ಕೊಟ್ಟು ಹಳ್ಳಿಗಳಲ್ಲಿ ವೈದ್ಯಕೀಯ ತಪಾಸಣೆ ಮಾಡುತ್ತಿರುವುದು ಸಂತೋಷ ಕೊಡುತ್ತದೆ. ಕಂಪನಿಯ ಸುತ್ತಲಿನ ಯುವಕರು ಉದ್ಯಮದಲ್ಲಿ ಕೆಲಸ ಮಾಡುವಲ್ಲಿ ನೀರತ್ತರಾಗಿದ್ದಾರೆ. ಇದರ ಪರಿಣಾಮವಾಗಿ ನಿರುದ್ಯೋಗ ಕಡಿಮೆಯಾಗಿದೆ ಎಂದು ಅವರು ಹರ್ಷ ವ್ಯಕ್ತ ಪಡಿಸಿದರು. ಉದ್ದಿಮೆಯ ಇನ್ನೂ ಹೆಮ್ಮರವಾಗಿ ಬೆಳೆಯಲು ಹಾರೈಸಿದರು.

5. **ಮಹೇಶ ಕುಂಬಾರ: ಗೋಕಾಕ ನಿವಾಸಿ ಉಸ್ತುವಾರಿ ಪ್ರಿನ್ಸಿಪಾಲ– ಸರಕಾರಿ ಪದವಿ ಕಾಲೇಜ, ಗೋಕಾಕ.**
ಪ್ರಸ್ತಾವಿತ ಪರಿಸರ ಸ್ನೇಹಿ ಯೋಜನೆಯನ್ನು ವೈಯಕ್ತಿಕವಾಗಿ ಅವರು ಸ್ವಾಗತಿಸಿದರು ಮತ್ತು ಕಳೆದ 4 ವರ್ಷಗಳಿಂದ ಗಾಳಿ, ನೀರು ಮತ್ತು ಶಬ್ದದ ವಿಷಯದಲ್ಲಿ ಯಾವುದೇ ಪರಿಸರ ಹಾನಿಯಾಗಿಲ್ಲ ಎಂದು ಅವರು ವ್ಯಕ್ತ ಪಡಿಸಿದರು. ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಯೋಜನೆಯಡಿ ಸಾಮಾಜಿಕ ಸೇವೆ ಮತ್ತು ಸುಧಾರಣೆಗಳ ಮೂಲಕ ಸಮಾಜದ ವಿಶ್ವಾಸವನ್ನು ಕಂಪನಿಯು ತೆಗೆದುಕೊಳ್ಳುತ್ತಿದೆ. ಕಂಪನಿಯು 4 ಲಕ್ಷ ರೂಪಾಯಿ ಮೌಲ್ಯದ ಕುಡಿಯುವ ನೀರಿನ (RO) ಘಟಕಗಳನ್ನು ಸ್ಥಾಪಿಸಿದೆ ಮತ್ತು ವಿದ್ಯಾರ್ಥಿ ಸಮುದಾಯದ ಸುರಕ್ಷಿತ ಆರೋಗ್ಯವನ್ನು ಖಾತರಿ ಪಡಿಸುತ್ತಿರುವ ಕಂಪನಿಗೆ ಅವರು ತಮ್ಮ ಹೃತ್ಪೂರ್ವಕ ಕೃತ್ಯಜ್ಞತೆಯನ್ನು ವ್ಯಕ್ತ ಪಡಿಸಿದ್ದಾರೆ. ಈ ವ್ಯವಸ್ಥೆಯಿಂದ ನಮ್ಮ ಕಾಲೇಜಿನ ಸಿಬಂಧಿ ವರ್ಗ ಹಾಗೂ ವಿದ್ಯಾರ್ಥಿ ವರ್ಗ ಚಿರಋಣಿಯಾಗಿದ್ದೇವೆ. ಕಂಪನಿಯು ಘಟಪ್ರಭಾ ಪಕ್ಷಿಧಾಮ ಹಾಗೂ ಗೋಕಾಕ ಜಲಪಾತದ ಸೌಂದರ್ಯದ ಬಗ್ಗೆ ಕಾಳಜಿವಹಿಸುತ್ತಿದೆ. ಪ್ರಸ್ತಾವಿತ ಯೋಜನೆಯಿಂದ ಗೋಕಾಕ ನಗರದಲ್ಲಿ ಪರೋಕ್ಷ ಉದ್ಯೋಗಗಳು ಖಂಡಿತವಾಗಿಯೂ ಹೆಚ್ಚುತ್ತವೆ ಎಂದು ಅವರು ಹೇಳಿದರು. ಉತ್ತಮ ವಾತಾವರಣವನ್ನು ಕಂಪನಿಯು ಅಸ್ತಿತ್ವದಲ್ಲಿರುವ 6 ಮೆ. ವ್ಯಾ. ವಿದ್ಯುತ್ ಸ್ಥಾವರವನ್ನು 18 ಮೆ. ವ್ಯಾ ಗೆ ವಿಸ್ತರಿಸಲು ಉದೇಶಿಸಿದೆ. ಸಲಹೆಗಾರರು ಈಗಾಗಲೆ ವಿವರವಾದ ಅಧ್ಯಯನದ ವರದಿಯನ್ನು ಮತ್ತು ಪರಿಸರದ ಪ್ರಭಾವದ ಮೌಲ್ಯ ಮಾಪನದ ಕಾರ್ಯ ಸಾದತೆಯನ್ನು ಪ್ರದರ್ಶಿಸಿದರು. ರಾಕೆಟ್ ರಿದ್ಧಿ ಸಿದ್ಧಿ ಕಂಪನಿಯು ಅತ್ಯುನ್ನತ ಮಟ್ಟದ ನವೀನ ತಾಂತ್ರಿಕತೆಯನ್ನು ಹಾಗೂ ಕಚ್ಚಾವಸ್ತುಗಳನ್ನು ಅಳವಡಿಸಿ, ಉತ್ತಮ ಪರಿಸರವನ್ನು ನಿರ್ಮಿಸುವ ಬಗ್ಗೆ ವಿಶ್ವಾಸವಿರುವುದಾಗಿ ತಿಳಿಸಿದರು. ಅಲ್ಲದೆ ಈ ಯೋಜನೆ ರಾಜ್ಯದ ವಿದ್ಯುತ್ ಸಮಸ್ಯೆಯನ್ನು ಕಡಿಮೆ ಮಾಡುವುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

6. **ಸುನಿಲ್ ಭಗತ: ಗೋಕಾಕ ನಿವಾಸಿ**

ರಾಕೆಟ್ ಕಂಪನಿಯು ಗೋಕಾಕನ ಬೆನ್ನೆಲುಬಾಗಿದೆ. ಬಡತನ ನಿರ್ಮೂಲನೆ ಮಾಡುವ ಪ್ರಯತ್ನವನ್ನು ಕಂಪನಿಯು ಮಾಡಿದೆ. ಹಸಿರು ಪಟ್ಟಿಯನ್ನು ಅಭಿವೃದ್ಧಿ ಪಡಿಸಲು ಮತ್ತು ಅನೇಕ ಸಾಮಾಜಿಕ ಚಟುವಟಿಕೆಗಳಿಗೆ ಕಂಪನಿಯ ಸಾಕಷ್ಟು ಹಣ ಖರ್ಚು ಮಾಡಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಪ್ರಸ್ತಾವಿತ ಯೋಜನೆಯು ರಾಜ್ಯದ ವಿದ್ಯುತ್ ಕೊರತೆಯನ್ನು ನೀಗಿಸಬಹುದು.

7. **ಉದಯಕುಮಾರ ಪಾಟೀಲ. ರೈತರು, ಕೊಣ್ಣೂರ ನಿವಾಸಿ.**

ನಾನು ಒಬ್ಬ ಕೃಷಿಕ. ಈ ಕಂಪನಿಯು ನಮಗೆ ತಾಯಿಯ ಸಮಾನ. ಕಂಪನಿಯ ಸಾಕಷ್ಟು ಸೌರ್ಯ ದೀಪಗಳನ್ನು ಬೀದಿಗಳಲ್ಲಿ ಸ್ಥಾಪಿಸಿದೆ, ಇದು ಸಾರ್ವಜನಿಕರಿಗೆ ಸಹಾಯವಾಗಿದೆ ಮತ್ತು ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ಕಂಪನಿಯು ಹತ್ತಿರದ ಸರ್ಕಾರಿ ಶಾಲೆಗಳನ್ನು ನವೀಕರಿಸಿದೆ.

8. **ಮಧು ಬಾಬು: ತೆಲಂಗಾಣ ನಿವಾಸಿ**

ಅವರು ಕಂಪನಿಯ ಸಲಹೆಗಾರರು ಹತ್ತು ಕಿಲೋ ಮೀಟರ್ ಸುತ್ತಳತೆಯ ಪ್ರದೇಶದಲ್ಲಿ ಗಾಳಿ, ನೀರು ಮತ್ತು ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಿ, ನಿಗದಿತ ಮಟ್ಟದಲ್ಲಿ ಇರುವುದನ್ನು ತಿಳಿಸಿರುತ್ತಾರೆ. ದಯವಿಟ್ಟು ಬೆಳೆಗಳ ಉತ್ಪಾದನೆಗಳ ಮಾಹಿತಿಯನ್ನು ಹತ್ತಿರವಿರುವ ಕೃಷಿ ಭೂಮಿಯಿಂದ ಪಡೆಯಲು ಅಭಿಪ್ರಾಯಪಟ್ಟರು. ಅವರು ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಆವರಣದಲ್ಲಿ ಮಳೆನೀರು ಕೊಯ್ಲು ಯೋಜನೆಗಳನ್ನು ಸುಧಾರಿಸಲು ಸಲಹೆ ನೀಡಿದರು. ಇದರಿಂದ ಬೇಸಿಗೆಯಲ್ಲಿ ಘಟಪ್ರಭಾ ನದಿಯ ನೀರಿನ ಕೊರತೆಯನ್ನು ನೀಗಿಸಬಹುದು. ಅವರು ಕಂಪನಿಯ ಸುತ್ತಲಿನ ಆವರಣದಲ್ಲಿ ಶೇಕಡಾ 50ರಷ್ಟು ಹಸಿರು ಪಟ್ಟಿಯನ್ನು (ಹಣ್ಣಿನ ಮತ್ತು ಔಷಧಿಯ ಗಿಡಗಳನ್ನು) ಹತ್ತಿರದ ಹಳ್ಳಿಗಳಲ್ಲಿ ಮತ್ತು ರಸ್ತೆಯ ಅಕ್ಕ-ಪಕ್ಕದಲ್ಲಿ ಅಭಿವೃದ್ಧಿಪಡಿಸಲು ಸಲಹೆ ನೀಡಿದರು. ಸ್ಥಳೀಯರಿಗೆ ಉದ್ಯೋಗದಲ್ಲಿ ಆದ್ಯತೆ ನೀಡಲು, ಒಳ್ಳೆಯ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಶೈಕ್ಷಣಿಕ ವ್ಯವಸ್ಥೆಯನ್ನು ಹಳ್ಳಿಗರಿಗೆ ಒದಗಿಸಲು ಸಲಹೆ ತಿಳಿಸಿದರು. ಮತ್ತು ಸಾಂಸ್ಥಿಕ ಸಾರ್ವಜನಿಕ ಜವಾಬ್ದಾರಿ ಚಟುವಟಿಕೆಗಳಿಗಾಗಿ ಸಮಿತಿಯನ್ನು ರಚಿಸಲು ಸಲಹೆ ನೀಡಿದರು. ಸದರಿ ಯೋಜನೆಗೆ ಪರವಾನಿಗೆಯನ್ನು ನೀಡುವಂತೆ ಅಭಿಪ್ರಾಯಪಟ್ಟರು.

9. **ನಿಯಾಜ ದೇಸಾಯಿ: ಗೋಕಾಕ ನಿವಾಸಿ**

ನೀರಿನ ಮರುಬಳಕೆಯ ಬಗ್ಗೆ ಕಂಪನಿಯ ತ್ಯಾಜ್ಯ ನೀರಿನ ಸಂಸ್ಕರಣಕ್ಕೆ ಅತ್ಯುತ್ತಮ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವುದರಿಂದ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಲಾಗುತ್ತಿರುವ ಬಗ್ಗೆ ಅವರು ಹರ್ಷ ವ್ಯಕ್ತಪಡಿಸಿದರು. ಹಸಿರುಮನೆ ಅನಿಲಗಳನ್ನು ಸರಿದೂಗಿಸಲು ಅವರಣದಲ್ಲಿ ಕಂಪನಿಯು ಗಮನಾರ್ಹ ಹಸಿರು ಪಟ್ಟಿಯನ್ನು ಅಭಿವೃದ್ಧಿಪಡಿಸಿದೆ. ಯೋಜನೆಯು ಹಲವು ಪರೋಕ್ಷ ಪ್ರಯೋಜನಗಳಿಗೆ ಕಾರಣೀಭೂತವಾಗುವದರಿಂದ, ಸದರಿ ಯೋಜನೆಯನ್ನು ಸ್ವಾಗತಿಸಿದರು.

ಅವರು ಓರ್ಝೋನ ಪದರು ಸಂರಕ್ಷಣೆಯ ಬಗ್ಗೆ ಕಾಳಜಿಯನ್ನು ವ್ಯಕ್ತ ಪಡಿಸಿದರು. ಭವಿಷ್ಯದ ಪೀಳಿಗೆಗೆ ಉತ್ತಮ ವಾತಾವರಣವನ್ನು ಹಸ್ತಾಂತರಿಸುವ ಜವಾಬ್ದಾರಿ ನಮ್ಮೊಂದಿಗೆ ಇರುತ್ತದೆ ಮತ್ತು ಕಂಪನಿ ಆ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಂಪನಿಯಲ್ಲಿ ಕಲುಷಿತ ನೀರನ್ನು **RO** ತಂತ್ರಜ್ಞಾನದಿಂದ ಶುದ್ಧೀಕರಿಸಿ ಶೇಕಡಾ 80 ರಷ್ಟು ನೀರನ್ನು ಮರು ಬಳಕೆ ಮಾಡುತ್ತಿದ್ದಾರೆ. ಕಂಪನಿಯು ಭವಿಷ್ಯದ ಪೀಳಿಗೆಯ ಕುರಿತು ಯೋಚಿಸುತ್ತಿದೆ. ಸೌರ ಶಕ್ತಿಯ ವ್ಯವಸ್ಥೆಯನ್ನು ಸುಧಾರಿಸಲು ಕಂಪನಿಯ ಅಧಿಕಾರಗಳಿಗೆ ಅವರು ಕೋರಿದರು. ಹಸಿರು ಮನೆ ಅನಿಲಗಳನ್ನು ಸರಿದೂಗಿಸಲು ಆವರಣದಲ್ಲಿ ಕಂಪನಿಯು ಗಮನಾರ್ಹವಾಗಿ ಹಸಿರು ಪಟ್ಟಿ ಬೆಳೆಸಿದೆ. ಯೋಜನೆಯು ಹಲವು ಪರೋಕ್ಷ ಪ್ರಯೋಜನಗಳಿಗೆ ಕಾರಣೀಭೂತವಾಗುವದರಿಂದ, ಸದರಿ ಯೋಜನೆಯನ್ನು ಸ್ವಾಗತಿಸಿದರು.

ಓಝೋನ ಪದರ ಕ್ಷೀಣಿಸುವದರ ಬಗ್ಗೆ ಸ್ಪಷ್ಟಪಡಿಸಲು ಸಾರ್ವಜನಿಕ ಆಲಿಕೆಯ ಸಮಿತಿಯ ಅಧ್ಯಕ್ಷರು ಕಂಪನಿಯ ಅಧಿಕಾರಿಗಳಿಗೆ / ಸಲಹೆಗಾರರಿಗೆ ಸೂಚಿಸಿದರು.

ಹಸಿರುಮನೆ ಅನಿಲಗಳ ಉತ್ಪಾದನೆ ಜಾಸ್ತಿಯಾದರೆ, ಓಝೋನ ಪದರು ಕ್ಷೀಣಿಸುತ್ತದೆ. ಕಲ್ಲಿದ್ದಲನ್ನು ಉರವಲಾಗಿ ಬಳಸುವದರಿಂದ ಇಂಗಾಲದ ಡೈ ಆಕ್ಸೈಡ್ ವಾತಾವರಣವನ್ನು ಸೇರಿ ಸಮಸ್ಯೆಯನ್ನುಂಟು ಮಾಡುತ್ತದೆ. ಸದರಿ ಉದ್ದಿಮೆಯಲ್ಲಿ ಶೇಕಡಾ 33 ರಷ್ಟು ಹಸಿರು ಪಟ್ಟಿ ಇರುವುದರಿಂದ ವಾತಾವರಣದಲ್ಲಿರುವ ಇಂಗಾಲದ ಡೈ ಆಕ್ಸೈಡ್‌ನ್ನು ಕಡಿಮೆ ಮಾಡುತ್ತದೆ. ಆದ್ದರಿಂದ ಓಝೋನ್ ಪದರು ಕ್ಷೀಣಿಸುವ ಸಮಸ್ಯೆ ಉಂಟಾಗುವುದಿಲ್ಲವೆಂದು ವಿವರಿಸಿದರು.

10. **ರಾಯಪ್ಪಾ ಅಡಿವೆಪ್ಪಾ ಬಾಗೋಜಿ: ಮಾಹಾಲಿಂಗೇಶ್ವರ ನಗರ ಗೋಕಾಕ ನಿವಾಸಿ**
ಹತ್ತಿರವಿರುವ ನಾಗರಿಕರಗೆ ಸುರಕ್ಷಿತ ಕುಡಿಯುವ ನೀರು ಪಡೆಯಲು ಅನುಕೂಲವಾಗುವಂತೆ ಅವರು ಡಿ ವೈ ಎಸ್ ಪಿ ಕಛೇರಿಯ ಬಳಿ (RO) ಘಟಕವನ್ನು ಸ್ಥಾಪಿಸಲು ಕಂಪನಿಗೆ ಮನವಿ ಮಾಡಿದರು.

11. **ಪ್ರಕಾಶ ಲಕ್ಷೆಟ್ಟಿ : ಗೋಕಾಕ ನಿವಾಸಿ**
ಘಟಪ್ರಭಾ ಪಕ್ಷಿಧಾಮದ ಸಂರಕ್ಷಣಾ ಯೋಜನೆಯನ್ನು ಕಂಪನಿಯು ಮಾಡಿಕೊಂಡ ರೀತಿಯಲ್ಲಿ ಸಮೀಪದ ಕಡಬಗಟ್ಟಿ ಮತ್ತು ಮಲ್ಲಿಕಾರ್ಜುನ ಗುಡ್ಡಗಳ ಹಸಿರು ಪಟ್ಟಿ ಸುಧಾರಿಸಲು ಅವರು ಸಲಹೆ ನೀಡಿದರು, ಇದು ಸಾಧ್ಯವಾದರೆ ಧೂಳಿನ ಹೊರಸೂಸುವಿಕೆಯನ್ನು ತಗ್ಗಿಸಬಹುದು. ಅವರು ಧೂಳಿನ ಹೊರಸೂಸುವಿಕೆಗಳನ್ನು ತಪ್ಪಿಸಲು ಆವರಣದಲ್ಲಿ ಹಾರು ಬೂದಿಯ ಸಂಗ್ರಹಣೆಯನ್ನು ಕಡಿಮೆಗೊಳಿಸಲು ಮತ್ತು ನಿರ್ವಹಣೆಯನ್ನು ಮಾಡುವಂತೆ ಸಲಹೆ ನೀಡಿದರು. ಕಂಪನಿಗಳಲ್ಲಿ ಅಳವಡಿಸಿಕೊಂಡ ತ್ಯಾಜ್ಯ ನೀರಿನ ಶೇಕಡಾ 80 ರಷ್ಟು ಮರುಬಳಕೆ ಯೋಜನೆಗಳನ್ನು ಅವರು ಪ್ರಶಂಶಿಸಿದರು. ಕಾರ್ಯಸಾಧ್ಯತೆಯ ವರದಿಗಳನ್ನು ಪ್ರಾಯೋಗಿಕವಾಗಿ ಅನುಸರಿಸಲು ಹಾಗೂ ನೀರು ಮತ್ತು ಹಾರು ಬೂದಿಯನ್ನು ನಿಯಂತ್ರಿಸುವ ಮೂಲಕ ಸುತ್ತ ಮುತ್ತಲಿನ ಒಟ್ಟಾರೆ ಆರೋಗ್ಯ ಸ್ಥಿತಿಯನ್ನು ಖಚಿತ ಪಡಿಸಿಕೊಳ್ಳಲು ಸಲಹೆ ನೀಡಿದರು.

ಕಂಪನಿಯು ಯೋಜನೆಯ ಸ್ಥಳ ಮತ್ತು ಉದ್ದೇಶಿತ ಯೋಜನೆಯಿಂದ ಪ್ರಭಾವಿತ ಗೊಳ್ಳಗಾಗಬಹುದಾದ ಸುತ್ತಮುತ್ತಲಿನ ಜನರಿಗೆ ಈ ಸಾರ್ವಜನಿಕ ವಿಚಾರಣೆಯನ್ನು ತಮ್ಮ ಅಭಿಪ್ರಾಯ, ಸಲಹೆ ಮತ್ತು ಟೀಕೆಟಿಪ್ಪಣಿ ವ್ಯಕ್ತಪಡಿಸಲು ಆಹ್ವಾನಿಸಲಾಗಿತ್ತು. ತಮ್ಮ ಅಭಿಪ್ರಾಯಗಳನ್ನು ವ್ಯಕ್ತಡಿಸಿದ ಎಲ್ಲ ಸದ್ಯಸರು, ಕಂಪನಿಯ ಸಿ.ಎಸ್.ಆರ್ ಚಟುವಟಿಕೆಗಳನ್ನು ಶ್ಲಾಘಿಸಲು ಈ ವೇದಿಕೆಯನ್ನು ಬಳಸಿಕೊಂಡರು. ಮಾಹಿತಿ ಮತ್ತು ವರಧಿಗಳ ಆಧಾರದ ಮೇಲೆ ಕಂಪನಿಯು ಮೆಚ್ಚುಗೆಗೆ ಸಮಾನವಾಗಿ ಅರ್ಹವಾಗಿದೆ. ಕಂಪನಿಯ ಅಧಿಕಾರಿಗಳು ವಿವರಿಸಿರುವಂತೆ, ಇದು ಕೈಗಾರಿಕಾ ವಿದ್ಯುತ್ ಸ್ಥಾವರ ಯೋಜನೆಯಾಗಿದ್ದು, ಉದ್ಯಮವು ನಿರಂತರವಾಗಿ ಕಾರ್ಯ ನಿರ್ವಹಿಸಲು ಉಪಯುಕ್ತವಾಗುವುದು, ಹೀಗಾಗಿ ವಿದ್ಯುತ್ ರಫ್ತು ಮಾಡಲು ಸಾಧ್ಯವಿಲ್ಲ. ಪ್ರಸ್ತುತಿಯಲ್ಲಿ ಉಲ್ಲೇಖಿಸಿದಂತೆ, ಈ ಯೋಜನೆಯು ವಿವಿಧ ಸಂಬಂಧಿತ ಚಟುವಟಿಕೆಗಳಿಂದ ಪರೋಕ್ಷ ಉದ್ಯೋಗಗಳನ್ನು ಹೆಚ್ಚಿಸುತ್ತದೆ.

ಉದ್ದೇಶಿತ ಯೋಜನೆಯಿಂದ ಘಟಪ್ರಭಾ ಪಕ್ಷಿಧಾಮಕ್ಕೆ ಸಂಭವಿಸಬಹುದಾದ ಪರಿಸರ ಆಘಾತಗಳನ್ನು ಪ್ರಶ್ನಿಸಿದಾಗ ಕಂಪನಿಯ ಅಧಿಕಾರಿಗಳ ಹೇಳಿಕೆಯಂತೆ 73 ಮೀಟರ್ ಎತ್ತರದ ಚಿಮನಿಯನ್ನು ಸ್ಥಾಪಿಸುವುದರಿಂದ ಹಾಗೂ ಉದ್ದಿಮೆಯು ಪ್ರಕೃತಿ ಗುಡ್ಡಗಳಿಂದ ಆವರಿಸಲ್ಪಟ್ಟಿದ್ದರಿಂದ ಹಾಗೂ ಗಾಳಿಯ ದಿಕ್ಕು ಪಕ್ಷಿ ಧಾಮದ ಕಡೆಗೆ ಇಲ್ಲದಿರುವುದರಿಂದ ಯಾವುದೇ ಪರಿಸರ ಆಘಾತಗಳು ಸಂಭವಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಆದಾಗ್ಯೂ ಘಟಪ್ರಭಾ ಪಕ್ಷಿಧಾಮವನ್ನು ಸಂರಕ್ಷಿಸಲು ಅನೇಕ ಜೈವಿಕ ವೈವಿಧ್ಯತೆ ಮತ್ತು ವನ್ಯ ಜೀವಿ ಸಂರಕ್ಷಣೆ ಯೋಜನೆಗಳನ್ನು ಕಂಪನಿಯು ಪ್ರಸ್ತಾಪಿಸಿದೆ.

ಗೋಕಾಕ ನಗರವು ಅನೇಕ ಪ್ರವಾಸಿ ಸ್ಥಳಗಳಿಂದ ಆವೃತವಾಗಿರುವುದರಿಂದ ಪ್ರವಾಸೋದ್ಯಮ ಸ್ಥಳಗಳನ್ನು ಹಾಗೂ ನೈಸರ್ಗಿಕ ಸೌಂದರ್ಯವನ್ನು ಭವಿಷ್ಯದಲ್ಲಿ ಸುಧಾರಿಸಲು ಕಂಪನಿ ಅಧಿಕಾರಿಗಳಿಗೆ ನಾನು ತಿಳಿಸುತ್ತೇನೆ.

ಕಂಪನಿಯ ಪ್ರಸ್ಥಾಪಿತ ಯೋಜನೆಯಿಂದ ಕಂಪನಿಯ ಅಭಿವೃದ್ಧಿ, ಸುತ್ತ ಮುತ್ತಲಿನ ಜನಜೀವನ ಹಾಗೂ ಪ್ರವಾಸಿ ಸ್ಥಳಗಳು ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇನೆ.

ಪರಿಸರದ ಮೇಲೆ ಆಗತಕ್ಕಂತಹ ಪರಿಣಾಮಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದ್ದು, ಇದಕ್ಕೆ ಕೈಗಾರಿಕೆಯವರು ಅವರ ಸಲಹೆಗಾರರ ಮೂಲಕ ಪರಸರಕ್ಕೆ ಪ್ರತಿಕೂಲ ಪರಿಣಾಮ ಉಂಟಾಗದಂತೆ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ವಿವರಸಿದ್ದು, ಇಂದಿನ ಸಭೆಯ ಎಲ್ಲಾ ನಡುವಳಿಗಳನ್ನು ದಾಖಲು ಮಾಡಿ ಅದನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮುಖಾಂತರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯ, ನವದೆಹಲಿ ಇವರಿಗೆ ಕಳುಹಿಸಿ ಕೊಡಲಾಗುತ್ತದೆ.

ವಂದನಾರ್ಪಣೆಯೊಂದಿಗೆ ಈ ಕಾರ್ಯಕ್ರಮವು ಮುಕ್ತಾಯಗೊಂಡಿತು.

(ಡಾ. ಸುರೇಶ ಇಟ್ನಾಳ ಕ.ಆ.ಸೇ.)
ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು ಬೆಳಗಾವಿ, ಕರ್ನಾಟಕ